ಶ್ರೀ ಎಚ್. ಎಂ. ಚನ್ನಬಸಪ್ಪ —ಮಾನ್ಯ ಸದಸ್ಯರು ವಿಷಯ ತಿಳಿಯದೆ ಮಾತನಾಡುತ್ತಿದ್ದಾರೆ. ಅಲ್ಲಿ ಕೆರೆ ಇದೆ, ನೀರು ಇದೆ, ಒಂದುಸಾವಿರ ಎಕರೆಗೆ ನೀರಾವರಿ ಮಾಡುತ್ತಿದ್ದಾರೆ ಡ್ಯಾಂಬರ್ ಟ್ಯಾಂಕ್ ಇದೆ. ಅಲ್ಲಿ 2ಸಾವಿರ ಎಕರೆಗೆ ನೀರು ಕೊಡುತ್ತಾ ಇದ್ದೇವೆ. ಅವರು ಕೇಳುವುದು ಇನ್ನಷ್ಟು ಬಡಾವಣೆ ಮಾಡಿ ಎಷ್ಟು ಹೆಚ್ಚಿಗೆ ಭೂಮಿಗೆ ನೀರು ಕೊಡಲಕ್ಕೆ ಸಾಧ್ಯವಾಗುತ್ತದೋ ಅಷ್ಟು ನೀರು ಎಂದು ಕೇಳುತ್ತಿದ್ದಾರೆ ನಾವು ನೀರು ಕೊಡಿಲಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದೇವೆ. ನೀವು ಅದರ ಬಗ್ಗೆ ಪ್ರಶ್ನೆ ಹಾಕುತ್ತಿದ್ದೀರಿ.

Mr. DEPUTY SPEAKER.—Sri B. Sathyanarayana Singh may put Question. No 164.

Aboliton of Check-Posts

164. Sri B. E. RAMAIAH (Siruguppa).—

Will the Minister for Finance be pleased to state:—

(*a*) the total number of check-posts which are functioning in Bellary District at present (give details) ;

(*b*) whether the Government is aware of the widespread opinion of the public that corruption is rampant among officers working in the check-posts ;

(*c*) in view of it, will Government take immediate steps to abolish the check-posts as recommended by the Boothalingam Committee ?

Sri M. Y. GHORADE (Minister for Finance).—

(*a*) Two ; one at Siruguppa and another at Hospet.

(*b*) No.

(*c*) Does not arise.

ಶ್ರೀ ಬಿ. ಸತ್ಯನಾರಾಯಣಸಿಂಗ್.—ತಾವು (ಬಿ) ಗೆ ಉತ್ತರವಾಗಿ ಗೊತ್ತಿಲ್ಲ ಎಂದು ಹೇಳುತ್ತೀರಿ, ಚೆಕ್ ಪೋಸ್ಟ್‌ಗಳಲ್ಲಿ ಲಂಚಗುಳಿತನ ತುಂಬಿದೆ. ಗೊತ್ತಿಲ್ಲ ಎಂದು ಹೇಳುತ್ತೀರಿ. ಅನೇಕಸಲ ಈ ವಿಷಯ ಚರ್ಚೆಗೆ ಬಂದಿದೆ. ಈಗಲಾದರೂ ಅಪಾದನೆ ಮಾಡುತ್ತಿದ್ದೇನೆ ಚೆಕ್ ಪೋಸ್ಟ್‌ನಲ್ಲಿ ಲಂಚಗುಳಿತನ ತುಂಬಿದೆ ಅದಕ್ಕೆ ಏನು ಹೇಳುತ್ತಿರಿ ?

†ಶ್ರೀ ಕೆ. ಎಚ್. ಪಾಟೀರ್.—ಅಪಾದನೆ ಮಾಡುವುದು ಬೇರೆ. ನಿರ್ದಿಷ್ಟವಾಗಿ ಸರ್ಕಾರದ ಗಮನಕ್ಕೆ ತರುವುದು ಬೇರೆ. ನಿರ್ದಿಷ್ಟವಾಗಿ ಚಾರ್ಜ್ ಬಂದಿಲ್ಲ. ಲಂಚದ ಅಪಾದನೆ ಸಾರ್ವತ್ರಿಕವಾಗಿ ಇದ್ದೇ ಇದೆ.

ಉಪಾಧ್ಯಕ್ಷರು.—ತಮ್ಮ ಕಡೆ ಸಕಾರಣವಾಗಿ ಚಾರ್ಜ್‌ಸ್ ಇದ್ದರೆ ಕಳುಹಿಸಿಕೊಡಿ.

ಶ್ರೀ ಬಿ. ಸತ್ಯನಾರಾಯಣ ಸಿಂಗ್. - ಏನಾದರೂ ಹೇಳುತ್ತಾರೆ, ಚೆಕ್‌ಪೋಸ್ಟ್‌ನಲ್ಲಿ ಕೆಲಸ ಮಾಡುವ ಅಧಿಕಾರಿಗಳು ದುಂದು ಜೀವನ ನಡೆಸುವುದನ್ನು ನೋಡಿದರೆ ಅವರು ಹೆಚ್ಚಿನ ಸಂಪತ್ತು ಗಳಿಸಿರುವುದು ಗೊತ್ತಾಗುತ್ತದೆ. ಸಿ.ಐ.ಡಿ. ಮೂಲಕ ತನಿಖೆ ನಡೆಸಿ ಯೋಗ್ಯ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ವಿಷಯ ಇದಕ್ಕೆ ಸಿ.ಐ.ಡಿ. ವಿಶೇಷ ಮಾನ್ಯ ಸದಸ್ಯರೇ ಬರೆದರೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆ.